- 3 -
ಕ್ರಿಮಿನಲ್ ಮಿಸ್ ಸಂ. : **247/2018**
ಪಿ.ಡಬ್ಲ್ಯೂ : **01**

ದಿನಾಂಕ : **17-08-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಎದುರುದಾರರ ಪರ ಶ್ರೀ. ಎಸ್ ಜಿ ವಿ . ವಕೀಲರಿಂದ :-**

ಈಗ ನೀವು ಎಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ನನ್ನ ತಾಯಿ ಮನೆಯಾದ ಚನ್ನಮ್ಮನಪಾಳ್ಯದಲ್ಲಿ ಎಂದು ನುಡಿಯುತ್ತಾರೆ. 2 ವರ್ಷಗಳಿಂದ ನೀವು ಬೆಂಗಳೂರಿನಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ನನ್ನ ತಾಯಿಯ ಮನೆಯಲ್ಲಿ ವಾಸವಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಸದರಿ ಚನ್ನಮ್ಮನಪಾಳ್ಯದಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ 7 ವರ್ಷಗಳಿಂದ ಇದ್ದೇನೆ ಎಂದು ನುಡಿಯುತ್ತಾರೆ. ನೀವು ಹಾಗೂ ಎದುರುದಾರರ ಬೇರೆಯಾಗಿ 7 ವರ್ಷಗಳಿಂದ ಪ್ರತ್ಯೇಕ ವಾಸ ಇದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಬೆಂಗಳೂರಿನಲ್ಲಿ ದೊಡ್ಡಹೊನ್ನಯ್ಯ ಎಂಬುವವರ ಜೊತೆ ವಾಸ ಇದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಅವರು ಯಾರು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುುತ್ತಾರೆ.

2010 ನೇ ಇಸವಿಯಿಂದ ನೀವು ಎದುರುದಾರರನ್ನು ಬಿಟ್ಟು ಪ್ರತ್ಯೇಕ ವಾಸ ಇದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಸ್ತುತ್ತ ಪ್ರಕರಣವನ್ನು ಹೊರತು ಪಡಿಸಿ ಇದಕ್ಕೂ ಮೊದಲು ಜೀವನಾಂಶಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ವಿವಾಹ ನಿಮ್ಮ ಮನೆಯ ಮುಂದೆ ಚಪ್ಪರ ಹಾಕಿ

ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮದುವೆಗೆ ಸುಮಾರು 50 ಸಾವಿರ ಒಳಗಡೆ ಖರ್ಚು ಆಗಿದ್ದು ಸದರಿ ಹಣವನ್ನು ಎದುರುದಾರರೇ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ಆರ್ಥಿಕವಾಗಿ ಬಲಿಷ್ಟಇಲ್ಲದ ಕಾರಣ ಎದುರುದಾರರೇ ಹಣವನ್ನು ಖರ್ಚು ಮಾಡಿ ಮದುವೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ತಾಯಿಯವರಿಂದ ನಿಮಗಾಗಲಿ ಹಾಗೂ ಎದುರುದಾರರಿಗಾಗಲಿ ಯಾವುದೇ ಒಡವೆಗಳನ್ನು ಕೊಟ್ಟಿರುವುದಿಲ್ಲ ಅಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಮದುವೆಗೆ ಸುಮಾರು 8 ಲಕ್ಷ ಹಣ ಖರ್ಚಾದ ಬಗ್ಗೆ ಹಾಗೂ 100 ಗ್ರಾಂ ಬಂಗಾರ ಕೊಟ್ಟ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸುಳ್ಳು ಹೇಳಿರುವುದರಿಂದ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ವಿವಾಹವಾದ ನಂತರ ಊರಿನಲ್ಲಿ ಜೀವನ ಮಾಡಲು ಯಾವುದೇ ಆಧಾರ ಇರುವುದಿಲ್ಲವೆಂದು ಬೆಂಗಳೂರಿಗೆ ಎದುರುದಾರರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಿವಾಹವಾದ ನಂತರ ಎದುರುದಾರರು ತಮ್ಮ ಊರಿನಲ್ಲಿ ಎಷ್ಟು ದಿವಸ ಇದ್ದರು ಎಂದರೆ ಸಾಕ್ಷಿ 5 ತಿಂಗಳು ಇದ್ದರು ಎಂದು ನುಡಿಯುತ್ತಾರೆ. ಊರಿನಲ್ಲಿ ಜೀವನ ನಡೆಸಲು ಯಾವುದೇ ಅನುಕೂಲ ಇರುವುದಿಲ್ಲ ಎಂದು ಎದುರುದಾರರು ನಿಮ್ಮನ್ನು ಬೆಂಗಳೂರಿಗೆ ಕರೆದುಕೊಂಡು ಬಂದಿದ್ದರು ಎಂದರೆ ಸಾಸಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಎದುರುದಾರರಿಗೆ ರೂ. 2,00,000/- ಹಣವನ್ನು ಕೊಟ್ಟಿರುತ್ತಾರೆ ಎಂದು ಹೇಳಿದ್ದು ಯಾವ ದಿನಾಂಕ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮನೆಯನ್ನು ಕಟ್ಟುವಾಗ ಕೋಳಿ ಅಂಗಡಿ ಹತ್ತಿರ ಕೊಟ್ಟಿರುತ್ತಾರೆ

ಎಂದು ನುಡಿಯುತ್ತಾರೆ ಆದರೆ ದಿನಾಂಕ , ತಿಂಗಳು ಮತ್ತು ಇಸವಿಯನ್ನು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಹಣವನ್ನೂ ಕೊಟ್ಟಿರುವುದಿಲ್ಲ ಆದ ಕಾರಣ ದಿನಾಂಕ , ತಿಂಗಳು ನೆನಪು ಇರುವುದಿಲ್ಲವೆಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಎದುರುದಾರರು ನಿಮ್ಮ ವಿರುದ್ದ ಮಾಗಡಿ ಪೋಲಿಸ್ ಠಾಣೆಯಲ್ಲಿ 2 ಭಾರಿ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರನ್ನು ನೀವು ಸದರಿ ದೊಡ್ಡಹೊನ್ನೇಗೌಡರವರ ಜೊತೆ ಇದ್ದೀರಿ ಎಂದು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಯಾವ ವಿಚಾರಕ್ಕಾಗಿ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಹೇಳಿ ದೂರನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮಕ್ಕಳಾದ ಮೇಲೆ ಎದುರುದಾರರನ್ನು ಹಾಗೂ ಅವರ ತಂದೆ ತಾಯಿಯನ್ನು ನೋಡಿಕೊಳ್ಳದೆ 2010 ರಿ ಂದ ಗಂಡನ ಮನೆಯನ್ನು ಬಿಟ್ಟು ವಾಸ ಇದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ವಿಚ್ಛೇಧನಕ್ಕಾಗಿ ನಿಮ್ಮ ವಿರುದ್ದ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**